## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.897/2024**
**CW : 04 PW: 05**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 23.01.2026**

| | |
|---|---|
| ಹೆಸರು | : ಶರಣಬಸ್ಸಪ್ಪ ಪಾಟೀಲ್ |
| ತಂದೆಯ ಹೆಸರು | : ಶ್ರೀಮಂತರಾವ ಪಾಟೀಲ್ |
| ವಯಸ್ಸು | : 42 |
| ಉದ್ಯೋಗ | : ಅಬಕಾರಿ ಉಪ ನಿರೀಕ್ಷಕರು |
| ವಾಸಸ್ಥಳ | : ಲಿಂಗಸೂಗೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಚಿತ್ತಾಪೂರ ವಲಯದಲ್ಲಿ 2014 ರಿಂದ 2025 ರವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ದಿ: 22/04/2023 ರಂದು ನಾನು ಕಛೇರಿಯಲ್ಲಿ ಇರುವಾಗ ಚಾಸಾ-3 ಇವರು ನನ್ನನ್ನು ಕರೆಸಿ ಒಂದು ವಿಷಯ ತಿಳಿಸಿದ್ದೇನೆಂದರೆ ಶಹಾಬಾದ ಪಟ್ಟಣದಸ್ಟೇಷನ್ ತಾಂಡಾದ ಬಳಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಕೆ ಮಾಡುತ್ತಾರೆ ಎಂದು ಹೇಳಲಾಗಿತ್ತು. ಕೂಡಲೇ ನಾನು, ಚಾಸಾ-1, ಚಾಸಾ-5 ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಶಹಾಬಾದನ ಬಸ ನಿಲ್ದಾಣಕ್ಕೆ ಬಳಿ ಹೋಗಿ ವಾಹನ ನಿಲ್ಲಿಸಿ, ಅಲ್ಲಿರುವ ಎರಡು ಜನರನ್ನು ಕರೆದುಕೊಂಡು ಭಾತ್ಮಿ ವಿಚಾರವನ್ನು ತಿಳಿಸಿದಾಗ, ಪಂಚರಾಗಲು ಅವರು ಒಪ್ಪಿಕೊಂಡಿರುತ್ತಾರೆ.

ಸಮವಸ್ತ್ರದಲ್ಲಿರುವ ನಮ್ಮನ್ನು ನೋಡಿ ಒಬ್ಬ ಮಹಿಳೆಯು ಗಾಬರಿಗೊಂಡು ಓಡಿ ಹೋಗಿದ್ದು ಇರುತ್ತದೆ. ಆ ಮಹಿಳೆಯನ್ನು ಹಿಡಿಯಲು ಪ್ರಯತ್ನಿಸಿದಾಗ ಸದರಿ ಮಹಿಳೆಯು ನಮಗೆ ಸಿಗಲಿಲ್ಲ. ಮನೆಯ ಶೋಧನೆಗಾಗಿ ಅಲ್ಲಿ ನೆರೆದಿರುವ ಜನರನ್ನು ಪಂಚರಾಗಲು ಕೇಳಿಕೊಂಡಿದ್ದು ಅದಕ್ಕೆ ಅವರು ನಿರಾಕರಿಸಿರುತ್ತಾರೆ. ಆದ್ದರಿಂದ ನಮ್ಮ ಜೊತೆ ಬಂದಿರುವ ಪಂಚರನ್ನೇ ಮನೆಯ ಶೋಧನೆಗಾಗಿ ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ.

ನಂತರ ನಾವು ಮನೆಯ ಒಳಗಡೆ ಹೋಗಿ ನೋಡಲಾಗಿ ಎರಡು ಕೋಣೆಗಳು ಕಂಡುಬಂದಿದ್ದು ಇರುತ್ತದೆ. ಮೊದಲನೇ ಕೊಣೆಯಲ್ಲಿ ನೋಡಲಾಗಿ ಏನೂ ಕಂಡು ಬರಲಿಲ್ಲ. ನಂತರ ಎರಡನೇ ಕೋಣೆಯಲ್ಲಿ ನೋಡಲಾಗಿ 5 ಲೀಟರಿನ 2 ಪ್ಲಾಸ್ಟಿಕ ಕ್ಯಾನಗಳು ಇರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ನಂತರ ಅದರ ಹತ್ತಿರ ಹೋಗಿ ನೋಡಲಾಗಿ ಬಿಚ್ಚಿ ನೋಡಿದಾಗ ತಲಾ ಒಂದು ಕ್ಯಾನಿನಲ್ಲಿ 5 ಲೀಟರಿನಂತೆ ಒಟ್ಟು 10 ಲೀಟರನಷ್ಟು ಕಳ್ಳಭಟ್ಟಿ

ಸಾರಾಯಿ ದೊರೆತಿದ್ದು ಇರುತ್ತದೆ. ಅದರ ಪಕ್ಕದಲ್ಲಿಯೇ ಸುಮಾರು 200 ಲೀಟರ ಸಾಮರ್ಥದ ಒಂದು ಬ್ಯಾರಲ ಕಂಡುಬಂದಿದ್ದು, ಅದರಲ್ಲಿ 150 ಲೀಟರ ಬೆಲ್ಲದ ಕೊಳೆಯು ಇತ್ತು. ತಲಾ ಕ್ಯಾನಿನಿಂದ ನಾವು ರಾಸಾಯನಿಕ ಪರೀಕ್ಷೆಗಾಗಿ 180 ಎಮ್.ಎಲ್. ಅಳತೆಯುಳ್ಳ ಗಾಜಿನ ಬಾಟಲಿಯಲ್ಲಿ ತೆಗೆದುಕೊಂಡಿದ್ದು ಇರುತ್ತದೆ. ಹಾಗೂ ಬೆಲ್ಲದ ಕೊಳೆಯನ್ನು ಒಂದು ಲೀಟರ ಸಾಮರ್ಥ್ಯವುಳ್ಳ ಪ್ಲಾಸ್ಟಿಕ ಬಾಟಲಿಯಲ್ಲಿ ತೆಗೆದುಕೊಂಡಿರುತ್ತೇವೆ. ಅದರ ಮೇಲೆ ಮಾದರಿ ಚೀಟಿಯನ್ನು ತಯಾರಿಸಿ ಪ್ರಕರಣದ ವಿವರವನ್ನು ಬರೆದು ಅಂಟಿಸಿದ್ದು ಇರುತ್ತದೆ. ಸದರಿ ಬಾಟಲಿಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ, ದಾರವನ್ನು ಕಟ್ಟಿ ಇಲಾಖೆಗೆ ಸಂಬಂಧಪಟ್ಟ ಅರಕಿನ ಮೊಹರನ್ನು ಹಾಕಿರುತ್ತೇವೆ.

ಪಂಚನಾಮೆಯನ್ನು ನಾವು ಸಾಯಂಕಾಲ 5.30 ರಿಂದ 6.30 ರವರೆಗೆ ಮಾಡಿರುತ್ತೇವೆ. ನಂತರ ಠಾಣೆಗೆ ಹೋಗಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ನಾವು ದಾಖಲಾತಿಗಳನ್ನು ರವಾನಿಸಿರುತ್ತೇವೆ ಹಾಗೂ ಸರ್ಕಾರಿ ತರಫೆ ಒಂದು ಫಿರ್ಯಾದಿಯನ್ನು ಮಾಡಿರುತ್ತೇವೆ. ಸ್ಥಳೀಯರನ್ನು ವಿಚಾರಿಸಲಾಗಿ ಸದರಿ ಮನೆಯು ಆರೋಪಿತಳಿಗೆ ಸೇರಿದ್ದು ಇರುತ್ತದೆ ಎಂದು ಹೇಳಿದ್ದು ಇರುತ್ತದೆ. ಪಂಚರನ್ನು ಚಾಸಾ-5 ಇವರು ಬರಮಾಡಿಕೊಂಡಿರುತ್ತಾರೆ.

ನಾನು ಮುದ್ದೆ ಮಾಲುಗಳ ಸಮೇತ ದಿ: 12/06/2023 ರಂದು ವಿಧಿ ವಿಜ್ಞಾನ ಪ್ರಯೋಗಾಲಯ ರಾಯಚೂರಿಗೆ ತೆಗೆದುಕೊಂಡಿದ್ದು ಇರುತ್ತದೆ. ನಂತರ ದಿ: 27/07/2023 ರಂದು ಸದರಿ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿಯನ್ನು ತೆಗೆದುಕೊಂಡು ಬಂದು ಚಾಸಾ-6 ಇವರಿಗೆ ಕಡತಕ್ಕೆ ಅಳವಡಿಸಿಕೊಳ್ಳಲು ನೀಡಿದ್ದು ಇರುತ್ತದೆ.

ಸಾಕ್ಷಿದಾರರು ಈಗಾಗಲೇ ನಿಶಾನೆಗೊಳಿಸಿರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸಿದ್ದು ಇರುತ್ತದೆ. ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವ ಅರ್ಜಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6 (ಬಿ) ಎಂದು ಗುರುತಿಸಲಾಯಿತು. ನಾನು ಓಡಿ ಹೋಗಿರುವ ಆರೋಪಿಯನ್ನು ಗುರುತಿಸಬಲ್ಲೆ, ನ್ಯಾಯಾಲಯದಲ್ಲಿ ಉಪಸ್ಥಿತರಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ದಿ: 22/04/2023 ರಂದು ನಾನು ಕಛೇರಿಯಲ್ಲಿ ಇರುವಾಗ ಚಾಸಾ-3 ಇವರು ನನ್ನನ್ನು ಕರೆಸಿ

ಒಂದು ವಿಷಯ ತಿಳಿಸಿದ್ದೆನೆಂದರೆ ಶಹಾಬಾದ ಪಟ್ಟಣದ ಸ್ಟೇಷನ್ ತಾಂಡಾದ ಬಳಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಕೆ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಸಿಬ್ಬಂದಿಗಳೊಡನೆ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಬಂದಿದ್ದು ಇರುತ್ತದೆ. ನಾನು ಸ್ಥಳಕ್ಕೆ ಬಂದಿರುವ ವಾಹನದ ಬಗ್ಗೆ ನನ್ನ ಹೇಳಿಕೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಇವರು ಪಂಚರನ್ನು ಬರಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ನಾನು ಓಡಿ ಹೋದ ಮಹಿಳೆಯು ಯಾವ ದಿಕ್ಕಿಗೆ ಹೋದಳು ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಮಹಿಳೆಯ ಮನೆಯಲ್ಲಿ ಕಳ್ಳಭಟ್ಟಿ ಸರಾಯಿ ಹಾಗೂ ಬೆಲ್ಲದ ಕೊಳೆ ದೊರಕಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಪ್ರಕರಣದಲ್ಲಿ ಪಂಚನಾಮೆಯನ್ನು 5.30 ರಿಂದ 6.30 ರವರೆಗೆ ಜರುಗಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳ ಹೆಸರನ್ನು ವಿಚಾರ ಮಾಡಿರುವ ಸ್ಥಳಿಕರ ಕುರಿತು ನನ್ನ ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿ: 12/06/2023 ರಂದು ನಾನು ಮುದ್ದೆ ಮಾಲುಗಳನ್ನು ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 27/07/2023 ರಂದು ವರದಿಯನ್ನು ತಂದು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಡೆದ ಪ್ರಕರಣಕ್ಕೂ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಬೆಂಬಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**